ವರಾಹಿ ನೀರಾವರಿ ಯೋಜನೆ ಬಗ್ಗೆ

೨೩೪. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭-೮೮ರಲ್ಲಿ ದಕ್ಷಿಣ ಜಿಲ್ಲೆಯಲ್ಲಿ ವರಾಹಿ ನೀರಾವರಿ ಯೋಜನೆಯು ಕಾರ್ಯಾರಂಭ ಮಾಡಲಾಗುವುದೆಂದು ಈ ಹಿಂದೆ ಆಶ್ವಾಸನೆ ನೀಡಿದ್ದು, ಸದರಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಸರ್ಕಾರ ಕೈಗೊಂಡ ಕ್ರಮಗಳಾವುವು.

ಆ) ಹಾಗಿಲ್ಲದಿದ್ದಲ್ಲಿ, ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯ ಪರಿಷ್ಕೃತ ಅಂದಾಜಿಗೆ ತಾಂತ್ರಿಕ ಸಮಿತಿಯಿಂ ಶಿಫಾರಸ್ಸು ಪಡೆಯಲಾಗಿದ್ದು ಅರಣ್ಯ ಪ್ರದೇಶ ಬಿಡುಗಡೆಯಾದ ನಂತರ ಅಣೆಕಟ್ಟಿನ ಕೆಲಸಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡಿರುವುದು. ಈ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಅರಣ್ಯ ಪ್ರದೇಶ ಬಿಡುಗಡೆಯಾಗುವುದೇ ಮೂಲ ಅಡಚಣೆ ಹಾಗೂ ಸಂಪನ್ಮೂಲವನ್ನು ಸಂಸರಿಸಿ ಹಣ ಬಿಡುಗಡೆ ಮಾಡುವುದು.

ಆ) ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆಯಾಗಲು ಕೇಂದ್ರ ಸರಕಾರದ ಅನುಮತಿ ಅಗತ್ಯ ವಿರುವ ಕಾರಣ ನಿರ್ದಿಷ್ಟವಾಗಿ ಯೋಜನೆ ಕೆಲಸ ಪ್ರಾರಂಭವಾಗುವ ಸಮಯ ಸೂಚಿಸಲು ಸಾಧ್ಯ ವಿರುವುದಿಲ್ಲ.

ಮುದ್ರಣ ಮತ್ತು ಪ್ರಕಟಣೆಗಳಿಗೆ ಮಂಜೂರು ಮಾಡಿದ ಹಣ

೫೦೦ ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೬-೮೭ರಲ್ಲಿ ವಿವಿಧ ಇಲಾಖೆಗಳಿಗೆ ಮುದ್ರಣ ಮತ್ತು ಪ್ರಕಟಣೆಗಳಿಗೆ ಮಂಜೂರು ಮಾಡಿದ ಮೊಬಲಗು ಎಷ್ಟು?

ಆ) ಈ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ಮಂಡಿಸಿ ಸರಬರಾಜು ಮಾಡಬೇಕಾಗಿದ್ದ ಮುಖ್ಯ ಪುಸ್ತಕಗಳು, ಶೀದಿಗಳು ರಫಾರಂಗಳು ಇತ್ಯಾದಿ ಸಕಾಲದಲ್ಲಿ ದೊರೆಯದೆ ತೊಂದರೆ ಪಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಪ್ರತಿ ಇಲಾಖೆಗಳಿಗೆ ೧೯೮೬-೮೮ ರಲ್ಲಾದರೂ ಮುಂಚಿತವಾಗಿ ಸಾಕಷ್ಟು ಮುದ್ರಣ ಹಾಗೂ ಪ್ರಕಟಣೆ ಸಾಮಗ್ರಿಗಳನ್ನೂ ಪುಸ್ತಕಗಳನ್ನೂ ಫಾರಂಗಳನ್ನೂ ಸರ್ಕಾರ ಒದಗಿಸುವ ಭರವಸೆ ಕೊಡುವುದೇ?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಸರ್ಕಾರವು ವಿವಿಧ ಇಲಾಖೆಗಳಿಗೆ ಮುದ್ರಣ ಮತ್ತು ಪ್ರಕಟಣೆಗಳಿಗೆ ಪ್ರತ್ಯೇಕವಾಗಿ ಹಣವನ್ನು ಮಂಜೂರು ಮಾಡುವುದಿಲ್ಲ. ಆದರೆ ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ ವಿವಿಧ ಇಲಾಖೆಗೆ ಸಂಬಂಧ ಪಟ್ಟ ಮುದ್ರಣ ಮತ್ತು ಪ್ರಕಟಣೆಗಳ ಕಾರ್ಯವನ್ನು ನಿರ್ವಹಿಸುತ್ತದೆ. ಇದಕ್ಕೋಸ್ಕರ ೮.೬೬ ಕೋಟಿ ರೂ.ಗಳನ್ನು ಮಂಜೂರು ಮಾಡಿತ್ತು.

ಆ) ಇಲ್ಲಾ

ಯಾವ ನಿರ್ದಿಷ್ಟವಾದ ದೂರುಗಳು ಬಂದಿರುವುದಿಲ್ಲ.

ಇ) ಬೇಕಾದ ಮುದ್ರಣ ಹಾಗೂ ಪ್ರಕಟಣೆ ಸಾಮಗ್ರಿಗಳನ್ನೂ ಪುಸ್ತಕಗಳನ್ನು ಫಾರಂಗಳನ್ನು ಮುದ್ರಣ, ಲೇಖನ ಸಾಮಗ್ರಿ ಇಲಾಖೆ ಒದಗಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.